ಪ್ರತಿ ವಿಳಾಸ: ಯೂನಿರಿಜ್
ದೂರವಾಣಿ ಸಂಖ್ಯೆ.: 2419677/2419361
ಫ್ಯಾಕ್ಸ: 0821-2419363/2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ: 28-07-2017.

ಸಂಖ್ಯೆ:ಎಸಿ4/04/2017-18

## ಅಧಿಸೂಚನೆ

ವಿಷಯ: 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ(I, III & V) ಬಿ.ಎ./ಬಿ.ಎಸ್ಸಿ./ಬಿ.ಸಿ.ಎ./ಬಿ.ಕಾಂ./ಬಿ.ಟಿ.ಹೆಚ್./ಬಿ.ಎಸ್ಸಿ./(ಎಫ್.ಸಿ.ಎಸ್ಸಿ.)/ಬಿಬಿಎ/ಬಿ.ಎಸ್.ಡಬ್ಲ್ಯೂ./ ಬಿ.ಫೈನ್‌ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ. (ವಾಕ್ ಮತ್ತು ಶ್ರವಣ) ಪದವಿ ಕೋರ್ಸ್‌ಗಳ ಪ್ರವೇಶಾತಿ ಬಗೆಗೆ.

ಉಲ್ಲೇಖ: ಈ ಕಛೇರಿ ಇದೆ ಸಮ ಸಂಖ್ಯೆ ಅಧಿಸೂಚನೆಗಳ ದಿನಾಂಕ:04-05-2017 ಮತ್ತು 22-07-2017.

*****

ಉಲ್ಲೇಖಿತ ಅಧಿಸೂಚನೆಗಳಿಗೆ ಮುಂದುವರಿಕೆಯಾಗಿ, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳಲ್ಲಿ(ಕಾಲೇಜು ಅಭಿವೃದ್ಧಿ ಮಂಡಳಿಯವರು ನೀಡಿರುವ ಆಯಾ ವಿಷಯ ಸಮೂಹಗಳ ಸಂಖ್ಯಾಮಿತಿಯೊಳಗೆ ಸೀಟುಗಳು ಲಭ್ಯವಿದ್ದಲ್ಲಿ ಮಾತ್ರ) 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ರೂ.500/-ಗಳ ದಂಡ ಶುಲ್ಕದೊಂದಿಗೆ ದಿನಾಂಕ:27-07-2017 ಅಂತಿಮ ದಿನವಾಗಿತ್ತು. ವಿಶ್ವವಿದ್ಯಾನಿಲಯವು ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಹಲವಾರು ವಿದ್ಯಾರ್ಥಿಗಳು ಮರು ಪ್ರವೇಶ ಇತ್ಯಾದಿಗಳಿಗೆ ಅಹವಾಲು ಸಲ್ಲಿಸಿರುವ ಹಿನ್ನಲೆಯಲ್ಲಿ, ದಿನಾಂಕ:31-07-2017ರ ವರೆಗೆ ರೂ. 500/- ದಂಡ ಶುಲ್ಕದೊಂದಿಗೆ ದಿನಾಂಕವನ್ನು ವಿಸ್ತರಿಸಲಾಗಿದೆ. ಯಾವುದೇ ಕಾರಣದಿಂದ ಕಡೆಯ ದಿನಾಂಕವನ್ನು ರಜೆ ಎಂದು ಘೋಷಿಸಿದಲ್ಲಿ, ಅನ್ವಯಿಸುವ ದಿನಾಂಕವನ್ನು ಮುಂದಿನ ಕೆಲಸದ ದಿನಾಂಕವೆಂದು ಪರಿಗಣಿಸುವುದು. ಈ ಸಂಬಂಧ ಪ್ರತಿ ವಿದ್ಯಾರ್ಥಿಯಿಂದ ಕೆಳಕಂಡಂತೆ ಮುಚ್ಚಳಿಕೆಯನ್ನು ಬರೆಯಿಸಿಕೊಳ್ಳುವುದು ಹಾಗೂ ದ್ವಿತೀಯ ಪಿ.ಯು.ಸಿ. ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪ್ರವೇಶ ಅನುಮೋದನಾ ಪಟ್ಟಿಯಲ್ಲಿನ ಷರಾ ಕಾಲಂನಲ್ಲಿ ಸ್ಪಷ್ಟವಾಗಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ಎಂದು ನಮೂದಿಸುವುದು.

## ಮುಚ್ಚಳಿಕೆ

2017-18ನೇ ಶೈಕ್ಷಣಿಕ ಸಾಲಿನಲ್ಲಿ, ನಾನು ದಿನಾಂಕ__________ ಪ್ರವೇಶ ಪಡೆದಿರುತ್ತೇನೆ ಹಾಗೂ ಹಾಜರಾತಿಯು ನನ್ನ ಸ್ವಂತ ಜವಾಬ್ದಾರಿಯಾಗಿರುತ್ತದೆ ಮತ್ತು ವಿಶ್ವವಿದ್ಯಾನಿಲಯ/ಕಾಲೇಜು ಯಾವುದೇ ರೀತಿಯಲ್ಲೂ ಹೊಣೆಯಾಗಿರುವುದಿಲ್ಲ ಎಂದು ತಿಳಿದಿರುತ್ತೇನೆ.

ಕುಲಸಚಿವ

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಪಿ.ಎ./ ಬಿ.ಸಿ.ಎಸ್/ ಬಿ.ಎಸ್‌ಸಿ./ ಬಿ.ಕಾಂ./ಬಿ.ಬಿ.ಎ/ಬಿ.ಟಿ.ಹೆಚ್./ಬಿ.ಎಸ್.ಡಬ್ಲ್ಯೂ./ಬಿ.ಫೈನ್‌ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - **ದಿ.27-07-2017ರ ನಂತರ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆಯಾಗದಂತೆ ಕ್ರಮ ವಹಿಸಲು ಕೋರಿದೆ.**
2. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- ಮಾಹಿತಿಗಾಗಿ.

P.T.O

3. ನಿರ್ದೇಶಕರು, ಜಯ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು, ಸಯ್ಯಾಜಿರಾವ್ ರಸ್ತೆ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಡೀನರು, ವಿಜ್ಞಾನ/ವಾಣಿಜ್ಯ ಮತ್ತು ಕಲಾ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಪ್ರೊ.ಜಿ.ಹೇಮಂತ್ ಕುಮಾರ್. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.- **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**
11. ಸಂಬಂಧಿಸಿದ ಎಲ್ಲಾ ಉಪ ಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು/ ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.
13. ಕಛೇರಿ ಪ್ರತಿ